O.S. 94/2018
P.W.1

**ಸಾಕ್ಷಿಯನ್ನು ದಿನಾಂಕಃ 26-07-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀ ಸವಾಲು 1 ರಿಂದ 3 ನೇ ಪ್ರತಿವಾದಿಗಳ ಪರ ಶ್ರೀ ಆರ್ ಜಿ ಪಿ ವಕೀಲರವರಿಂದಃ**

ನನ್ನ ಹುಟ್ಟಿದ ಸ್ಥಳವು ಉದ್ಗಟ್ಟಿ ದೊಡ್ಡ ತಾಂಡದಲ್ಲಿರುವ ಬಾಪೂಜಿ ಪೂಜಾ ತಾಂಡ ಇರುವುದು. ನಾನು ಅಲ್ಲಿಯೇ ಜನಿಸಿದ್ದೇನೆ ಎಂದು ತೋರಿಸಲು ಯಾವುದೇ ದಾಖಲು ಹಾಜರುಪಡಿಸಿರುವುದಿಲ್ಲ. ಆ ಬಗ್ಗೆ ದಾಖಲೆಗಳಿರುವುದಿಲ್ಲ. ನಾನು ಸದರಿ ಸ್ಥಳದಲ್ಲಿ ಹುಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಈಗ ಉದ್ಗಟ್ಟಿ ದೊಡ್ಡ ತಾಂಡದಲ್ಲಿರುವ ಬಾಪೂಜಿ ಪೂಜಾ ತಾಂಡದಲ್ಲಿ ವಾಸ ಮಾಡುತ್ತಿದ್ದೇನೆ. ಹುಟ್ಟಿದಾಗಿನಿಂದ ಅಲ್ಲಿಯೇ ವಾಸ ಮಾಡುತ್ತಿದ್ದೇನೆ. ಸದರಿ ವಿಳಾಸಕ್ಕೆ ಸಂಬಂಧಿಸಿದಂತೆ ರೇಶನ್ ಕಾರ್ಡ್, ಆಧಾರ್ ಕಾರ್ಡ್, ಚುನಾವಣಾ ಚೀಟಿ ಮಾಡಿಸಿರುವುದಿಲ್ಲ. ಸಾಕ್ಷಿ ಮುಂದಮರೆದು ಹಾಲೂರು ಹಟ್ಟಿ ಗ್ರಾಮದ ವಿಳಾಸಕ್ಕೆ ಸಂಬಂಧಿಸಿದ ದಾಖಲೆಗಳನ್ನು ಮಾಡಿಸಿದ್ದೇನೆ. ಸದರಿ ಗ್ರಾಮವು ದಾವಣಗೆರೆ ತಾಲ್ಲೂಕಿನಲ್ಲಿ ಇರುವುದು ಎಂದರೆ ಸರಿ. ಹರಪನಹಳ್ಳಿ ತಾಲ್ಲೂಕು ಕಛೇರಿಯಲ್ಲಿ ಜಾನ್ಯ ನಾಯ್ಕು ಇವರ ಪರಿಚಯ ನನಗೆ ಇರುವುದಿಲ್ಲ.

ನನಗೆ ಇಬ್ಬರು ಅಕ್ಕಂದಿರು ಹಾಗೂ ಒಬ್ಬಾಕೆ ತಂಗಿ. ಶಾರದಾ ಬಾಯಿ ಮತ್ತು ಗೌರಿ ಬಾಯಿ ನನ್ನ ಅಕ್ಕಂದಿರು. ರೇಣುಕಾ ಬಾಯಿ ನನ್ನ ತಂಗಿ. ರೇಣುಕಾ ಬಾಯಿಯ ಗಂಡ ಹೆಸರು ಪುಟ್ಟಾ ನಾಯ್ಕು, ಶಾರದಾ ಬಾಯಿ ಗಂಡನ ಹೆಸರು ಶೇಖ್ರಾ ನಾಯ್ಕು, ಗೌರಿ ಬಾಯಿ ಗಂಡನ ಹೆಸರು ಹಾಲ್ಯ ನಾಯ್ಕು. ಗೌರಿ ಬಾಯಿ ಗಂಡನ ಹೆಸರು ಹಾಲ್ಯ ನಾಯ್ಕು ಅಲ್ಲ ಜಾನ್ಯ ನಾಯ್ಕು ಎಂದರೆ ಸರಿಯಲ್ಲ. ಜಾನ್ಯ ನಾಯ್ಕು ನನಗೆ ಮಾವನಾಗಬೇಕು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸರ್ವೇ ನಂ. 1 ಪಿ 162 ಇರುವುದು. ನನಗೆ 1 ಪಿ ಸರ್ವೇ ನಂಬರ್ ಒಟ್ಟು ವಿಸ್ತೀರ್ಣ ಗೊತ್ತಿರುವುದಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಸರಕಾರಿ ಜಮೀನು, ಪಶ್ಚಿಮಕ್ಕೆ ಲಚ್ಚಾ ನಾಯ್ಕು ಇವರ ಜಮೀನು, ಉತ್ತರಕ್ಕೆ ಶೇಷಗಿರಿ ನಾಯ್ಕು ಇವರ ಜಮೀನು ಹಾಗೂ ದಕ್ಷಿಣಕ್ಕೆ ಕಲ್ಲಳ್ಳಿ ಇರುವುದು. ಶೇಷಗಿರಿ ನಾಯ್ಕು ಇವರು ನನಗೆ ಸಂಬಂಧಿಕರಾಗಿರುವುದಿಲ್ಲ. ಶೇಷಗಿರಿ ನಾಯ್ಕು ರವರು ಇದೇ ನ್ಯಾಯಾಲಯದಲ್ಲಿ ಒಂದು ದಾವೆಯನ್ನು ಸಲ್ಲಿಸಿರುವರು ಎಂದರೆ ನನಗೆ ಗೊತ್ತಿಲ್ಲ.

ನನ್ನ ಪತ್ನಿಯ ಹೆಸರು ರೇಣುಕಾ ಬಾಯಿ. ಅವರ ಸ್ವಂತ ಊರು ಹಾಲೂರ ಹಟ್ಟಿ ನನ್ನ ಪತ್ನಿಯ ಹೆಸರು ರೇಣುಕಾ ಬಾಯಿ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲ. ನನ್ನ ಪತ್ನಿಯ ಹೆಸರು ರೇಣುಕಾ ಬಾಯಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ಶಾಂತ ವೀರನಾಯ್ಕು ಎಂಬ ಹೆಸರಿನವರು ನನ್ನನ್ನು ಹೊರತುಪಡಿಸಿ ಬೇರೆ ಯಾರು ಇರುವುದಿಲ್ಲ. ನನ್ನನ್ನು

ಹೊರತುಪಡಿಸಿ ನಮ್ಮ ಗ್ರಾಮದಲ್ಲಿ ಲಚ್ಚ ನಾಯ್ಕನ ಮಗ ಶಾಂತವೀರ ನಾಯ್ಕ ಮತ್ತು ನಾನ್ಯ ನಾಯ್ಕನ ಮಗ ಶಾಂತವೀರ ನಾಯ್ಕ ಎಂಬುವವರು ಇರುವರು ಎಂದರೆ ಸರಿಯಲ್ಲ. ಆ ಹೆಸರಿನವರು ಇದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗಳು ಕೂಡ ನಮ್ಮ ಊರಿನವರು. ಅವರಿಗೆ ಸರಕಾರದಿಂದ ಜಮೀನು ಮಂಜೂರಾಗಿದೆಯೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ 3 ನೇ ಪ್ರತಿವಾದಿಯ ಮಗ ಎಂದರೆ ಸರಿ. ಮಂಜಾ ನಾಯ್ಕನಿಗೆ ಸರಕಾರದಿಂದ ಜಮೀನು ಮಂಜಾರಗಿದೆ ಎಂದರೆ ಸರಿಯಲ್ಲ. ಆ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಆದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೂಲ ಪಟ್ಟ ದಾಖಲೆ ಮನೆ ಬಿದ್ದ ಕಾರಣ ಸುಟ್ಟು ಹೋಗಿದೆ. ಆ ವಿಚಾರವನ್ನು ನಾನು ವಾದ ಪತ್ರದಲ್ಲಿ ಹೇಳಿರುವುದಿಲ್ಲ. ನನಗೆ ಸರಕಾರದಿಂದ 4 ಎಕರೆ ಜಮೀನು ಮಂಜೂರಾಗಿದೆ. ರೇಣುಕಾ ಬಾಯಿಯವರು ಅದೇ ಜಮೀನನ್ನು ಉಪಯೋಗಿಸುವರು. ಪಟ್ಟ ಮಂಜೂರು ಮಾಡುವಂತೆ ಸರಕಾರಕ್ಕೆ ನಾನು ಅರ್ಜಿ ಹಾಕಿದ್ದೇನು. ಅರ್ಜಿಯ ಜೊತೆ ಲಗತ್ತಿಸಿದ ದಾಖಲೆಗಳು ನನಗೆ ನೆನಪಿಲ್ಲ.

4 ಎಕರೆ ಜಮೀನನ್ನು ಸರಕಾರ ನನಗೆ ಮಂಜೂರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಜಾನ್ಯ ನಾಯ್ಕನು ಸದರಿ ಪಟ್ಟವನ್ನು ಸೃಷ್ಠಿ ಮಾಡಿ ನನಗೆ ನೀಡಿರುವನು ಎಂದರೆ ಸರಿಯಲ್ಲ. ನಾನು ದಾವಣಗೆರೆ ತಾಲ್ಲೂಕಿನ ಹಾಲೂರಿನ ಗ್ರಾಮದಲ್ಲಿ ಹುಟ್ಟಿ ಬೆಳೆದಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿಯು ಸಹ ಅಲ್ಲಿಯೇ ಬೆಳೆದು ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಯರು ಕಷ್ಟ ಪಟ್ಟು ಜಮೀನನ್ನು ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸುಳ್ಳು ಪಟ್ಟವನ್ನು ಸೃಷ್ಠಿಸಿ ಪ್ರತಿವಾದಿಗಳ ನನ್ನ ಜಮೀನು ಎಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಎಲ್ಲಾ ದಾಖಲೆಗಳು ನಾನು ಹಾಗೂ ನನ್ನ ಮಾವನಾದ ಜಾನ್ಯ ನಾಯ್ಕ ಸೇರಿಕೊಂಡು ಸೃಷ್ಠಿಸಿದ ದಾಖಲೆಗಳು ಎಂದರೆ ನನಗೆ ಗೊತ್ತಿಲ್ಲ.

ನಾನು ಯಾವತ್ತೂ ದಾವಾ ಜಮೀನಿನ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು 1 ನೇ ಪ್ರತಿವಾದಿಯ ಸ್ವಾಧೀನದಲ್ಲಿರುವುದು ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯ ಹೆಂಡತಿಯಾದ ಸೋನಾ ಬಾಯಿ ಇವರ ಜಮೀನಿನ ಮೇಲೆ ಶೇಷಗಿರಿ ನಾಯ್ಕ ಇವರು ದಾವೆಯನ್ನು ಹಾಕಿರುವರು ಎಂದರೆ ಸರಿಯಲ್ಲ. ನಾವಿಬ್ಬರು ದುರುದ್ದೇಶದಿಂದ ಕೇಸುಗಳನ್ನು ಹಾಕಿದ್ದೇವೆ ಎಂದರೆ ಸರಿಯಲ್ಲ.

O.S. 94/2018
P.W.1

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

26.07.2024

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**